ಮೀಡಿಯಾದವರದು ಇರಬೋದಾ ಎಂಥಾ ಕುತ್ತು ಬಂತಪ್ಪಾ ಗಂಟೇ ನಿಂಗಾ... ಎಂದು ಯೋಚಿಸುವಾಗ ನಾಗರಾಜರ ಎರಡೂ ಕಿವಿಗಳು ಬೆಚ್ಚಗಾಗಿ, ತಲೆಗೆ ಬೆಂಕಿ ಬಿದ್ದಿದೆಯೋ ಎಂಬಂಥ ಅನುಭವವಾಯ್ತು.

ಆಗ ನಾಗರಾಜರ ತಲೆಗೆ ಬಂದಿದ್ದೇ ಈ ಡೈನಾಮಿಕ್ ರೇಖಾ...

ರೇಖಾ ಇಲ್ಲೇ ಲೋಕಲ್ ಹುಡುಗಿ. ಈಗ ಗಂಡನೊಂದಿಗೆ ಬೆಂಗಳೂರಿನಲ್ಲಿ ನೆಲೆಸಿದ್ದಾಳೆ. ಅವಳು ನಾಗರಾಜನ ಮೊದಲ ಬ್ಯಾಚಿನ ಸಂಶೋಧನಾ ವಿದ್ಯಾರ್ಥಿನಿ. ಇವಳಿಗೂ ನಾಗರಾಜರಿಗೂ ಎಣ್ಣೆ-ಸೀಗೆಕಾಯಿಯಂಥ ಅವಿನಾಭಾವ ಸಂಬಂಧವಿತ್ತು. ಮಂಗಳೂರಿನಲ್ಲಿ ಬಿ.ಇಡಿ, ಶಿವಮೊಗ್ಗದಲ್ಲಿ ಸೆಕೆಂಡಿಯರ್ ಎಂ.ಎಸ್ಸಿ, ಓದುತ್ತಿದ್ದ ರೇಖಾ, ವಿಜ್ಞಾನ ಅಕಾಡೆಮಿಯವರು ಹಮ್ಮಿಕೊಂಡಿದ್ದ ಒಂದು ವಿಚಾರ ಸಂಕಿರಣದಲ್ಲಿ ಪ್ರಬಂಧ ಮಂಡಿಸಲು ಬಂದಿದ್ದಳು. ಆ ಗೋಷ್ಠಿಯ ಅಧ್ಯಕ್ಷತೆಯನ್ನು ಎಕ್ಸ್‌ವೈಜ್ಡ್ ವಿಷಯಗಳ ತಜ್ಞ ಡಾ. ನಾಗರಾಜರೇ ವಹಿಸಿದ್ದರು. ಅಲ್ಲಿ ಅವಳು ಮಂಡಿಸಿದ್ದ ಪ್ರಬಂಧದ ಗಂಭೀರ ಶೈಲಿ, ವಿಷಯದಲ್ಲಿದ್ದ ಸ್ಪಷ್ಟತೆ ಅವಳಲ್ಲಿದ್ದ ಆತ್ಮವಿಶ್ವಾಸ ಕಮ್ ಮೈಕಟ್ಟನ್ನು ಬಹಳ ಮೆಚ್ಚಿ, ವೇದಿಕೆಯಲ್ಲಿ ತನ್ನೊಂದಿಗೆ ಕುಂತಿದ್ದ ಸೀನಿಯರ್ ಪ್ರೊ. ಲಿಂಗರಾಜು ಅವರಲ್ಲಿ 'ಬಹಳ ಶಾರ್ಪ್ ಇರೋ ಹುಡುಗಿ ಸಾರ್ ಇವಳು' ಎಂದು ಪಿಸು ಪಿಸು ಮಾತಾಡಿದ್ದು ಸಾಲದೆಂಬಂತೆ ತನ್ನ ಅಧ್ಯಕ್ಷ ಭಾಷಣದಲ್ಲಿ ತುಸು ಹೆಚ್ಚು ಎಂಬಂತೆಯೇ ರೇಖಾಳನ್ನು ಕೊಂಡಾಡಿದ್ದರು.

ಇದೇ ಅಭಿಮಾನ-ವಿಶ್ವಾಸದಿಂದ ತನ್ನ ಓದಿನಲ್ಲಿರುತ್ತಿದ್ದ ಅನುಮಾನಗಳನ್ನು ಬಗೆಹರಿಸಿಕೊಳ್ಳಲು ಆಗಾಗ ನಾಗರಾಜರಿಗೆ ಫೋನ್ ಮಾಡುತ್ತಿದ್ದ ರೇಖಾ, ಮೂರೇ ಮೂರು ಸಾರಿ ಇವರೊಟ್ಟಿಗೆ ಫೋನಿನಲ್ಲಿ ಮಾತನಾಡಿ 'ಈಯಪ್ಪ ಬರೀ ಬುಡುಬುಡಿಕೆ ಅಲ್ಲಾಡಿಸೋ ಆಸಾಮಿ, ಓದು ಬರಹ ಬಿಟ್ಟು ಮಿಕ್ಕಿದ್ದೆಲ್ಲಾ ಮಾಡ್ತೈತೆ' ಅನ್ನೋ ತೀರ್ಮಾನಕ್ಕೆ ಬಂದು ಕರೆ ಮಾಡುವುದೇ ಬಿಟ್ಟಿದ್ದಳು.

ಎಂ.ಎಸ್ಸಿ ಮುಗಿಸಿದ ಬೆನ್ನಲ್ಲೇ ಜೂನಿಯರ್ ರಿಸರ್ಚ್ ಫೆಲೋಶಿಪ್‌ಗೆ ಆಯ್ಕೆಯಾಗಿ ತಕ್ಕ ಗುರುವಿನ ಹುಟುಕಾಟದಲ್ಲಿದ್ದ ರೇಖಾ ಅದ್ಯಾವುದೋ ಪುಸ್ತಕವೊಂದನ್ನು ಹುಡುಕುವ ನೆರವಿಗಾಗಿ ನಾಗರಾಜರಿಗೆ ಫೋನ್ ಮಾಡಿದ್ದಳು. ತುಂಬಾ ದಿನಗಳ ನಂತರ ಫೋನ್ ಮಾಡಿರುವುದರಿಂದ ರೇಖಾಳ ವಿದ್ಯಾಭ್ಯಾಸ, ಮನೆ-ಮಠ-ಮದುವೆ ಇತ್ಯಾದಿ ವಿಚಾರಿಸಿದರು. ಈ ಮಾತಿನ ನಡುವೆ ನಾಗರಾಜರು ಈಗ ತಾನೂ ಪಿಎಚ್.ಡಿ ಗೈಡ್ ಆಗಿರುವುದನ್ನು ತಿಳಿಸಿದ್ದರು. ರೇಖಾ ಜೆ.ಆರ್.ಎಫ್. ಫೆಲೋಶಿಪ್‌ಗೆ ಆಯ್ಕೆಯಾಗಿರುವುದನ್ನು ಕೇಳಿ ಸಂತಸಪಟ್ಟರು ಕೂಡ.

ಈ ಮಾತುಕತೆ ನಡೆದ ಕೆಲವೇ ದಿನಗಳಲ್ಲಿ ನಾಗರಾಜರಿದ್ದ ಯುನಿವರ್ಸಿಟಿಯಲ್ಲಿ ಪಿಎಚ್.ಡಿಗೆ ಕಾಲ್ ಆಯ್ತು. ಯಾವುದಕ್ಕೂ ಇರಲಿ ಅಂತ ಅರ್ಜಿ ಹಾಕಿದ ರೇಖಾ ಆಯ್ಕೆ ಕಮಿಟಿಯ ಮುಂದೆ ಮಂಡಿಸಿದ್ದ 'ಆಂಟಿ ಕ್ಯಾನ್ಸರ್ ಮೆಡಿಸೆನ್ಸ್ ಅಂಡ್ ಇಂಡಿಯನ್ ಫುಡ್ ಸಿಸ್ಟೆಮ್' ಕುರಿತ ಒಳನೋಟಗಳುಳ್ಳ ಸಿನಾಪ್ಸಿಸ್ ಕಮಿಟಿಯ ಎಲ್ಲ ಸದಸ್ಯರನ್ನು ಬೆರಗಾಗಿಸಿತ್ತು. ಇಂಥಾ ಪ್ರತಿಭಾವಂತರಿಗಲ್ಲದೆ ಮತ್ಯಾರಿಗೆ ಸೀಟು ಕೊಡೋದು ಅನ್ನೋ ತೀರ್ಮಾನಕ್ಕೆ ಕಮಿಟಿಯ ಬಹುತೇಕ ಸದಸ್ಯರು ಬಂದಿದ್ದರಾದರೂ ಅದರಲ್ಲಿ ಕೆಲವರು ವೈವಾ = ಎಂಟ್ರೆನ್ಸ್ ಎಕ್ಸಾಂನಲ್ಲಿ ಉತ್ತಮ ಸಾಧನೆ ತೋರಿದ ವಿದ್ಯಾರ್ಥಿಗಳನ್ನು ಆರಿಸಿಕೊಂಡರೆ, ಕೆಲವರು 'ಅಡ್ವಾನ್ಸ್' ಈಸ್ಕಂಡು ಈಗಾಗಲೇ ತಮ್ಮ ವಿದ್ಯಾರ್ಥಿಗಳನ್ನು ಬುಕ್ ಮಾಡಿಕೊಂಡಿದ್ದರು.

ಈ ರಾಜರಹಸ್ಯದ ಕಾರಣದಿಂದ ಖಾಲಿ ಇರುವ ಯಾವುದಾದರೂ ಗೈಡ್ ಒಪ್ಪಿದರೆ ಅವರ ಬಳಿ ಸೀಟ್ ಮಾಡಿಸೋಣ ಎಂದು ರೇಖಾಳ ಸೀಟ್ ವಿಚಾರವನ್ನು ಪೆಂಡಿಂಗ್ ಇಡಲಾಗಿತ್ತು. ಅಲ್ಲಿ ತನ್ನ ಪೇಮೆಂಟ್ ಸೀಟುಗಳನ್ನು ತುಂಬಿಕೊಂಡೂ, ಒಂದು ಸೀಟನ್ನು ಉಳಿಸಿಕೊಂಡು ಇನ್ನೂ ತನ್ನ ಡಬ್ಬಮಂಗಳಾರೆ ಅಂಗಡಿಯನ್ನು ಖಾಲಿ ಮಾಡದೆ ಕಮಿಟಿಯಲ್ಲಿ ಕೂತಿದ್ದ ಕುದುರೆ ನಾಗರಾಜರು ಏನು ಅಂದುಕೊಂಡರೋ ಏನೋ... ರೇಖಾಳಿಗೆ ತಾನೇ ಗೈಡ್ ಆಗಲು ಹತ್ತು ಸೆಂಟಿಮೀಟರ್ ಸ್ಮೈಲಿನೊಂದಿಗೆ ಒಪ್ಪಿಕೊಂಡಿದ್ದರು.

ರೇಖಾಳ ಸಂಶೋಧನೆಯು ಸಾಂಗಗೊಳ್ಳುತ್ತಾ ಮೂರು ವರ್ಷಗಳನ್ನು ಪೂರೈಸಿತ್ತು. ಒಮ್ಮೆ ಅದೇನೋ ಕೆಲಸಕ್ಕೆಂದು ರೇಖಾಳನ್ನು ಭೇಟಿ ಮಾಡಲು ಅವಳ ರೂಮಿಗೆ ಹೋಗಿದ್ದ ಕುದುರೆ ನಾಗರಾಜರು ಅಲ್ಲೇನೋ ಕಪಿಚೇಷ್ಟೆ ಮಾಡಿದ್ದರು. ಇದರಿಂದ ಕಸಿವಿಸಿಗೊಂಡ ರೇಖಾ ತನ್ನ ಗುರುಗಳ ಚಾರಿತ್ರ್ಯ ಕುಂಡಲಿಯನ್ನು